UASB
LIBRARY
Newspaper Clippings
Pg .1 Friday 24-12-2021 Jai Kisan



350 ದಶಲಕ್ಷ ಟನ್ ಆಹಾರ ಬೇಕು

2030ರ ವೇಳೆಗೆ ಉತ್ಪಾದನೆ ಹೆಚ್ಚಳ ಅಗತ್ಯ | ಕೃಷಿ ತಜ್ಞ ಡಾ.ಕೆ. ಶಿವರಾಮು ಮಾಹಿತಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ದೇಶದಲ್ಲಿ 2030ರ ವೇಳೆಗೆ ವಾರ್ಷಿಕ 350 ದಶಲಕ್ಷ ಟನ್ ಆಹಾರ ಉತ್ಪಾದಿಸುವ ಅಗತ್ಯವಿದ್ದು, ರೈತರು ಕೃಷಿ ಕ್ಷೇತ್ರದಲ್ಲಿ ಯಂತ್ರೋಪಕರಣ, ಮೊಬೈಲ್ ಆ್ಯಪ್ ಹಾಗೂ ಡಿಜಿಟಲ್ ತಂತ್ರಜ್ಞಾನಗಳ ಬಳಕೆ ಹೆಚ್ಚಿಸಬೇಕು ಎಂದು ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯದ ಸಿಬ್ಬಂದಿ ತರಬೇತಿ ಸಂಯೋಜಕ ಡಾ.ಕೆ. ಶಿವರಾಮು ತಿಳಿಸಿದ್ದಾರೆ.

ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯದಲ್ಲಿ ಗುರುವಾರ ನಡೆದ ರೈತರ ದಿನಾಚರಣೆಯಲ್ಲಿ ಮಾತನಾಡಿದರು.

» ಕೃಷಿಯಲ್ಲಿ ತಂತ್ರಜ್ಞಾನ ಅಳವಡಿಕೆ ಹೆಚ್ಚಾಗಲಿ

ದೇಶದಲ್ಲಿ 2020ರಲ್ಲಿ 900 ದಶಲಕ್ಷ ಕೃಷಿ ಕ್ಷೇತ್ರದ ಆಹಾರ ಉತ್ಪಾದನೆಯಾಗಿತ್ತು. ಈ ಪೈಕಿ 309 ದಶಲಕ್ಷ ಟನ್ ಆಹಾರ ಬೆಳೆ, 326 ದಶಲಕ್ಷ ಟನ್ ತೋಟಗಾರಿಕಾ ಬೆಳೆ, 187 ದಶಲಕ್ಷ ಟನ್ ಹೈನುಗಾರಿಕೆ ಮತ್ತು 80 ದಶಲಕ್ಷ ಟನ್ ಮಾಂಸ ಮೊಟ್ಟೆ ಉತ್ಪಾದನೆ ಆಗಿತ್ತು. 2030ರಲ್ಲಿ 350 ದಶಲಕ್ಷ ಟನ್ ಹಾಗೂ 2050ಕ್ಕೆ 405 ದಶಲಕ್ಷ ಟನ್ ಆಹಾರದ ಉತ್ಪಾದನೆಯ ಅಗತ್ಯತೆ ಇದೆ. ಹೀಗಾಗಿ, ಸಂಪನ್ಮೂಲ ಸದ್ಬಳಕೆ, ಕಾರ್ಮಿಕರ ಸಮಸ್ಯೆ ನೀಗಿಸಲು ಯಂತ್ರೋಪಕರಣ ಬಳಕೆ, ಮಾಹಿತಿ ತಂತ್ರಜ್ಞಾನ, ಮೊಬೈಲ್ ಆಪ್ ಬಳಕೆ (ತಂತ್ರಜ್ಞಾನ, ಮಾರುಕಟ್ಟೆ, ಹವಾಮಾನ ಮಾಹಿತಿಗೆ) ಮಾಡಬೇಕು. ಜತೆಗೆ, ನಿಖರ ಕೃಷಿ, ಆಟೋಮೇಶನ್, ಡಿಜಿಟಲ್ ತಂತ್ರಜ್ಞಾನ ಸೇರಿ ಹಲವು ಹೊಸ ಅಂಶಗಳನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೃಷಿಕರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳಲ್ಲಿ ಸುಧಾರಣೆ ಆಗಬೇಕೆಂದರೆ, ರೈತರು ಕೇವಲ ಉತ್ತಿ, ಬಿತ್ತಿ, ಕೊಯ್ಲು ಮಾಡುವ ಕೆಲಸಕ್ಕೆ ಸೀಮಿತವಾಗದೆ, ಕೊಯ್ಲೋತ್ತರ ಕೃಷಿಗಳಲ್ಲಿ (ಸಂಸ್ಕರಣೆ, ಮೌಲ್ಯವರ್ಧನೆ, ಗ್ರೇಡಿಂಗ್, ಬ್ರಾಂಡಿಂಗ್ ಇತ್ಯಾದಿ) ತೊಡಗಿಸಿಕೊಳ್ಳಬೇಕು. ಇದರಿಂದ ಹೆಚ್ಚಿನ ಆದಾಯ ಪಡೆಯಬಹುದು. ಜಾಗತಿಕ ಮಾರುಕಟ್ಟೆಯಲ್ಲಿ ಭಾರತೀಯ ಆಹಾರ ಹಾಗೂ ದಿನಸಿ ಮಾರುಕಟ್ಟೆ 6ನೇ ಸ್ಥಾನದಲ್ಲಿದೆ. 2018ರ ಅಂಕಿ-ಅಂಶಗಳ ಪ್ರಕಾರ ಭಾರತೀಯ ಆಹಾರ ಸಂಸ್ಕರಣಾ ಮಾರುಕಟ್ಟೆಯು 24,665 ಬಿಲಿಯನ್ ವಹಿವಾಟು ಹೊಂದಿದೆ. ಈ ಪ್ರಮಾಣ 2024ರ ವೇಳೆಗೆ 50 ಸಾವಿರ ಶತಕೋಟಿ ದಾಟುವ ಸಾಧ್ಯತೆಯಿದ್ದು, ಈ ವಿಫುಲ ಅವಕಾಶಗಳನ್ನು ಕೃಷಿಕರು ಬಳಸಿಕೊಳ್ಳಬೇಕು ಎಂದರು.

ಸಹಕಾರ ಮಹಾ ಮಂಡಳ ಕಾರ್ಯದರ್ಶಿ ಲಕ್ಷ್ಮೀಪತಯ್ಯ, ಪ್ರಾಧ್ಯಾಪಕರಾದ ಡಾ. ಗಣಪತಿ, ಡಾ. ನಾರಾಯಣರೆಡ್ಡಿ ಇತರರಿದ್ದರು.



ಸಮಗ್ರ ಕೃಷಿಯಿಂದ ಲಾಭ

ಎಲ್ಲ ರೈತರು ಸಮಗ್ರ ಕೃಷಿ ಅಳವಡಿಸಿ ಕೊಳ್ಳಬೇಕು. ವಾರ್ಷಿಕ ಬಹುಬೆಳೆಗಳನ್ನು ಮಾರುಕಟ್ಟೆಗೆ ಕೊಂಡೊಯ್ದರೆ ನಷ್ಟ ಅನುಭವಿಸಲು ಸಾಧ್ಯವಿಲ್ಲ. ಸಾಲದಿಂದ ಬಳಲಿದ್ದಾಗ, ಸಮಗ್ರ ಕೃಷಿ ಆಧಾರದಲ್ಲಿ ಟೊಮ್ಯಾಟೊ ಬೆಳೆದು ಸಾಲ ತೀರಿಸಿದ್ದೇನೆ. ಬೆಂಗಳೂರಿನಲ್ಲಿ ನಿವೇಶನ ಖರೀದಿ ಮಾಡಿದ್ದು, ಅದಕ್ಕೆ ಸಮಗ್ರ ಕೃಷಿಯೇ ಕಾರಣ ಎಂದು ಕೋಲಾರದ ರವಿಶಂಕರ್ ತಿಳಿಸಿದರು.



ನಗರದ ಕೃಷಿ ವಿಶ್ವವಿದ್ಯಾಲಯದಲ್ಲಿ ಗುರುವಾರ ಆಯೋಜಿಸಿದ್ದ ರೈತರ ದಿನಾಚರಣೆಯಲ್ಲಿ ಡಾ.ಕೆ. ಶಿವರಾಮು, ಲಕ್ಷ್ಮೀಪತಯ್ಯ, ಡಾ. ಗಣಪತಿ, ಡಾ. ನಾರಾಯಣರೆಡ್ಡಿ ಮತ್ತಿತರರು ಪಾಲ್ಗೊಂಡಿದ್ದರು.

24-12-2021
Vv Pg 04

ರಾಜ್ಯದ ರೈತರಿಗೆ ಬೇಕು ಬೆಲೆ ಬೆಂಬಲ

ಬೆಂಗಳೂರು: ನೈಸರ್ಗಿಕ ವಿಕೋಪಗಳಿಂದ ಕಂಗೆಟ್ಟು ನಷ್ಟದ ಸುಳಿಗೆ ಸಿಲುಕಿರುವ ರಾಜ್ಯದ ರೈತಾಪಿ ವರ್ಗಕ್ಕೆ ವೈಜ್ಞಾನಿಕ ಬೆಂಬಲ ಬೆಲೆ ಕೈಗೆಟುಕದಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಈ ಸಂಕಷ್ಟದಿಂದಾಗಿ ಸಾಲದ ಹೊರೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದರಿಂದ ಅನ್ನದಾತರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳತ್ತ ಮುಖಮಾಡಿದ್ದಾರೆ. ಪ್ರತಿ ವರ್ಷ

» ಸಾಲದ ಪ್ರಮಾಣ ಶೇ.57.7 ಹೆಚ್ಚಳ

ರಾಜ್ಯದಲ್ಲಿ ರೈತರ ಆದಾಯ ಸುಮಾರು 2.5 ಲಕ್ಷ ಕೋಟಿ ರೂ.ಬರಬೇಕು. ಅದರಲ್ಲಿ 50 ಸಾವಿರ ಕೋಟಿ ರೂ. ಹೈನುಗಾರಿಕೆಯಾದರೆ ಉಳಿದಿದ್ದು ಕೃಷಿ, ತೋಟಗಾರಿಕೆ ಉತ್ಪನ್ನ ಅವಲಂಬಿಸಿದೆ. ಆದರೆ, ದೇಶದಲ್ಲಿ ವರ್ಷಕ್ಕೆ 4 ಲಕ್ಷ ಕೋಟಿ ರೂ.ಗೂ ಹೆಚ್ಚಿನ ಮೊತ್ತದ ನಷ್ಟ ಸಂಭವಿಸುತ್ತಿದೆ. ಪ್ರಕೃತಿ ವಿಕೋಪದಂತಹ ಸಂದರ್ಭದಲ್ಲಿ ಇದು ಇನ್ನಷ್ಟು ಹೆಚ್ಚಾಗಿರುತ್ತದೆ. ವಿವರ ಪುಟ 5D

24-12-2021
Vv Pg 01

ఈనాడు కర్ణాటక
శుక్రవారం డిసెంబరు 24, 2021

జీకేవీకేలో రైతుల దినోత్సవం

బెంగళూరు (కెంగేరి), న్యూస్‌టుడే: వ్యవసాయ విశ్వవిద్యాలయం బెంగళూరు సిబ్బంది తర్ఫీదు విభాగం గురువారం నిర్వహించిన రైతుల దినోత్సవాన్ని సహకార సంఘాల అధికారి లక్ష్మీపతయ్య ప్రారంభించారు. గాంధీ వ్యవసాయ విజ్ఞాన కేంద్రం (జీకేవీకే)లో ఏర్పాటు చేసిన ఈ కార్యక్రమంలో లక్ష్మీపతయ్య మాట్లాడుతూ భారత్‌లో డిసెంబరు 23న రైతుల దినోత్సవంగా స్మరించడం మనందరి కర్తవ్యమన్నారు. ఇటీవల కాలంలో రైతులతోపాటు గ్రామీణాభివృద్ధిలో భాగంగా రోడ్డు, తాగునీటి వ్యవస్థ ఏర్పాట్లు జరుగుతున్నాయన్నారు. ఈ సందర్భంగా చర్చాగోష్ఠి, క్విజ్, తదితర పోటీలను నిర్వహించారు. సిబ్బంది శిక్షణా విభాగం శిక్షణా సంచాలకుడు డా.కె.శివరాము అధ్యక్షత వహించిన కార్యక్రమంలో ముఖ్య అతిథిగా మదనహళ్లి కోలారు రైతు, వ్యవసాయ వీవీ స్థానిక రాష్ట్రస్థాయి వ్యవసాయ ప్రశస్తి విజేత ఎం.ఎన్.రవిశంకర్, తదితరులు పాల్గొన్నారు.



టెంకాయ మొక్కకు నీరు పోస్తున్న లక్ష్మీపతయ్య, తదితరులు

ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ರೈತ ದಿನಾಚರಣೆ

ಉದಯಕಾಲ ನ್ಯೂಸ್

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಸಿಬ್ಬಂದಿ ತರಬೇತಿ ಘಟಕವು ರೈತರ ದಿನಾಚರಣೆಯನ್ನು ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಆಚರಿಸಲಾಯಿತು.

ಬೆಂಗಳೂರಿನ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಕಾರ್ಯದರ್ಶಿ, ಲಕ್ಷ್ಮೀ ಪತಯ್ಯ, ಅವರು ಕಾರ್ಯಕ್ರಮ ಉದ್ಘಾಟಿಸಿ ಭಾರತದಲ್ಲಿ ಸಹಕಾರ ಸಂಘಗಳ ಪಿತಾಮಹ ಡಾ. ವರ್ಗೀಸ್ ಕುರಿಯನ್ ರವರನ್ನು ರೈತರ ದಿನಾಚರಣೆಯೆಂದು ನೆನಪಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಗುಜರಾತ್‌ನಲ್ಲಿ ರೈತರನ್ನು ಮಧ್ಯವರ್ತಿಗಳಿಂದ ವಿಮುಕ್ತಗೊಳಿಸಿ, ಒಗ್ಗೂಡಿಸಿ ಆನಂದ್ ಬ್ರಾಂಡ್‌ನ್ನು ವಿಶ್ವದೆಲ್ಲೆಡೆ ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಸಹಕಾರ ಸಂಘಗಳು ಇತ್ತೀಚಿನ ದಿನಗಳಲ್ಲಿ ರೈತರ ಅಭಿವೃದ್ಧಿ ಜೊತೆಗೆ ಗ್ರಾಮೀಣ ಅಭಿವೃದ್ಧಿಗೂ ಮುಂದಾಗಿ ರಸ್ತೆ ಮತ್ತು ಕುಡಿಯುವ ನೀರಿನ ಸೌಕರ್ಯವನ್ನು ಸಹ ಒದಗಿಸುತ್ತಿದೆ. ಆದುದರಿಂದ ರೈತ ಬಾಂಧವರು ಈ ಅವಕಾಶದ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ರಾಜ್ಯ ಮಟ್ಟದ ಕೃಷಿ ಪ್ರಶಸ್ತಿ ವಿಜೇತರು, ಕೋಲಾರ ಜಿಲ್ಲೆಯ ಮದನಹಳ್ಳಿ, ರೈತರಾದ ಎಂ.ಎನ್. ರವಿಶಂಕರ್, ಸಮಗ್ರ ಕೃಷಿಯನ್ನು



ಅಳವಡಿಸಿಕೊಳ್ಳಬೇಕು ಹಾಗೂ ಒಂದೇ ಬೆಳೆಗೆ ಮಾರು ಹೋಗದೆ ಬಹು ಬೆಳೆಗಳನ್ನು ಮಾರುಕಟ್ಟೆ ಮಾಹಿತಿ ಮೇರೆಗೆ ಬೆಳೆದು ಲಾಭಗಳಿಸಲು ಮುಂದಾಗಬೇಕು. ಸಾವಿನ ದವಡೆಯಲ್ಲಿದ್ದ ನಾನು ಟೊಮೋಟೊವನ್ನು ಬೆಳೆದು ಸಾಲ ತೀರಿಸಿ ಬೆಂಗಳೂರಿನಲ್ಲಿ ನಿವೇಶನ ಹೊಂದಲು ಸಮಗ್ರ ಕೃಷಿಯೇ ಮೂಲ ಕಾರಣವೆಂದರು.

ಬೆಂಗಳೂರಿನ ಸಿಬ್ಬಂದಿ ತರಬೇತಿ ಘಟಕ, ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆಯ ತರಬೇತಿ ಸಂಯೋಜಕರಾದ, ಡಾ. ಕೆ. ಶಿವರಾಮು, ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕೃಷಿ ಕೇವಲ ಒಂದು ಕಾಯಕವಾಗದೇ ನಮ್ಮ ರಾಷ್ಟ್ರದ ಸಂಸ್ಕೃತಿಯ ಭಾಗವೂ ಆಗಿದೆ. ನಮ್ಮ ಗ್ರಾಮೀಣ ಬದುಕು, ಕಲೆ, ಉಡುಗೆ-ತೊಡುಗೆ ಮತ್ತು ಊಟ-ಉಪಚಾರ ಎಲ್ಲದರ ಮೂಲ ಕೃಷಿಯೇ ಆಗಿದೆ. ಕೃಷಿ ನಮ್ಮ ಬದುಕಿನ ಭಾಗವಾಗದೇ ಕೃಷಿಯೇ ನಮ್ಮ ಬದುಕಾಗಿದೆ. ರೈತರ ದಿನಾಚರಣೆ ಅಥವಾ ರಾಷ್ಟ್ರೀಯ ರೈತರ ದಿನವನ್ನು ಡಿಸೆಂಬರ್ 23 ರಂದು ಭಾರತದ ಐದನೇ ಪ್ರಧಾನ ಮಂತ್ರಿ ಚೌದರಿ ಚರಣ್ ಸಿಂಗ್ ಅವರ ಜನ್ಮ ದಿನದಂದು ಆಚರಿಸಲಾಗುತ್ತಿದೆ. ಮಧ್ಯಮ ವರ್ಗದ ರೈತ ಕುಟುಂಬದಲ್ಲಿ ಜನಿಸಿದ ಇವರು ತಮ್ಮ ರೈತ ಸ್ನೇಹಿ ನೀತಿಗಳಾದ ಕೃಷಿ ಉತ್ಪನ್ನ ಮಾರುಕಟ್ಟೆ ಮಸೂದೆ ಜಾರಿ, ಜಮೀನ್ದಾರಿ ಪದ್ಧತಿ ರದ್ದುಗೊಳಿಸುವಿಕೆ ಹಾಗೂ ಕಿಸಾನ್ ಟ್ರಸ್ಟ್ ಸ್ಥಾಪಿಸುವುದರ ಮೂಲಕ ''ಭಾರತದ ರೈತರ ಚಾಂಪಿಯನ್'' ಎಂದು ಪ್ರಸಿದ್ಧರಾದರು. ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದ ಇವರ ರೈತ ಪರ ಕಲ್ಯಾಣ ನೀತಿಗಳನ್ನು ಗುರುತಿಸಿದ ಕೇಂದ್ರ ಸರ್ಕಾರ 2001 ರಿಂದ ಚೌದರಿ ಚರಣ್ ಸಿಂಗ್ ರವರ ಜನುಮ ದಿನವನ್ನು ರೈತರ ದಿನಾಚರಣೆಯಾಗಿ ಹಮ್ಮಿಕೊಳ್ಳುತ್ತಿದೆ ಎಂದರು.

ಶೇ.57.7 ಹೆಚ್ಚಾದ ಸಾಲ | ಸಿಗುತ್ತಿಲ್ಲ ಲಾಭದ ಫಲ | ದೇಶದಲ್ಲಿ ವಾರ್ಷಿಕ ₹ 4 ಲಕ್ಷ ಕೋಟಿಗೂ ಹೆಚ್ಚಿನ ನಷ್ಟ

ರಾಜ್ಯದ ಕೃಷಿಕ ವರ್ಗಕ್ಕೆ ಬೇಕಿದೆ ಬೆಲೆ ಬೆಂಬಲ

■ ರುದ್ರಣ್ಣ ಹರ್ತಿಕೋಟೆ ಬೆಂಗಳೂರು

ನೆರೆ, ಬರದಂತಹ ಪ್ರಾಕೃತಿಕ ವಿಕೋಪಗಳಿಂದ ಕೃಷಿ ವಲಯ ಕಂಗೆಟ್ಟಿರುವ ನಡುವೆಯೇ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ತಳಹದಿ ಮೇಲೆ ಬೆಲೆ ಕೈಗೆಟುಕದಿರುವುದರಿಂದ ರೈತರ ಸಾಲದ ಹೊರೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದರಿಂದಾಗಿ ಕನಿಷ್ಠ ಬೆಂಬಲ ಬೆಲೆಗಿಂತ ಶಾಸನಾತ್ಮಕ ಬೆಂಬಲ ಬೆಲೆ ನೀಡಬೇಕೆಂಬ ಅನ್ನದಾತರ ಬೇಡಿಕೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸ್ಪಂದಿಸಬೇಕಿದೆ.

ಪ್ರತಿ ವರ್ಷ ರಾಜ್ಯದಲ್ಲಿ ರೈತರ ಆದಾಯ ಸುಮಾರು 2.5 ಲಕ್ಷ ಕೋಟಿ ರೂ. ಬರಬೇಕು. ಆದರಲ್ಲಿ 50 ಸಾವಿರ ಕೋಟಿ ರೂ. ಹೈನುಗಾರಿಕೆಯಾದರೆ ಉಳಿದಿದ್ದು ಕೃಷಿ, ತೋಟಗಾರಿಕೆ ಉತ್ಪನ್ನ ಆವಲಂಬಿಸಿದೆ. ಆದರೆ, ದೇಶದಲ್ಲಿ ವರ್ಷಕ್ಕೆ 4 ಲಕ್ಷ ಕೋಟಿ ರೂ.ಗೂ ಹೆಚ್ಚಿನ ಮೊತ್ತದ ನಷ್ಟ ಸಂಭವಿಸುತ್ತಿದೆ. ಪ್ರಕೃತಿ ವಿಕೋಪದಂತಹ ಸಂದರ್ಭದಲ್ಲಿ ಇದು ಇನ್ನಷ್ಟು ಹೆಚ್ಚಾಗಿರುತ್ತದೆ.

» ಹೆಚ್ಚಿನ ರೈತರು ಖರೀದಿ ಕೇಂದ್ರಗಳತ್ತ ಸುಳಿಯುತ್ತಿಲ್ಲ

» ಎಂಎಸ್‌ಪಿ ಕುರಿತು ಸಮಿತಿ ರಚನೆ

ರೈತರ ನಿರೀಕ್ಷೆ ಏನು?: ಕನಿಷ್ಠ ಬೆಂಬಲ ಬೆಲೆ ಸದ್ಯ ಭರಿಸಿದ ವೆಚ್ಚ ಹಾಗೂ ಕುಟುಂಬದ ಶ್ರಮ ಮಾತ್ರ ಒಳಗೊಂಡಿದೆ. ಆದರೆ ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸಿನಂತೆ ಭರಿಸಿದ ವೆಚ್ಚ, ಕುಟುಂಬದ ಶ್ರಮ, ಭೂಮಿಯ ಗೇಣಿ, ಸ್ವಂತ ಬಂಡವಾಳದ ಮೇಲಿನ ಬಡ್ಡಿ, ನಿರ್ವಹಣಾ ವೆಚ್ಚ ಹಾಗೂ ಶೇ.50 ಲಾಭಾಂಶ ಸೇರಿ ಬೆಂಬಲ ಬೆಲೆ ಲೆಕ್ಕ ಹಾಕಬೇಕು. ಅದಕ್ಕಾಗಿಯೇ ಶಾಸನಾತ್ಮಕ ಬೆಂಬಲ ಬೆಲೆ ಸಿಗುವಂತಾಗಬೇಕು ಎಂಬುದು ರೈತರ ನಿರೀಕ್ಷೆ. ಕೇಂದ್ರ ಸರ್ಕಾರದ ಮುಂದೆ ಎಂಎಸ್‌ಪಿಯ ವಿಚಾರ ಈಗ ಚರ್ಚೆಯಲ್ಲಿದೆ. ಸಮಿತಿಯೊಂದನ್ನು ರಚನೆ ಮಾಡಲಾಗಿದೆ. ಅಲ್ಲಿಯ ತನಕ ರಾಜ್ಯ ಸರ್ಕಾರ ಬೆಲೆ ಆಯೋಗದ ಶಿಫಾರಸಿನ ಬೆಲೆಯನ್ನು ನೀಡಬೇಕು ಎಂಬ ಒತ್ತಡಗಳಿವೆ.

ರೈತರೇ ಬರುತ್ತಿಲ್ಲ: ಬೆಂಬಲ ಬೆಂಬಲ ಬೆಲೆ ಕಡಿಮೆ ಇದೆ ಎಂಬ ಕಾರಣಕ್ಕೆ ಅನೇಕ ರೈತರು ಖರೀದಿ ಕೇಂದ್ರಗಳತ್ತ ಸುಳಿಯುತ್ತಿಲ್ಲ. ಇದರ ಜತೆಗೆ ಖರೀದಿಗೆ ಕೆಲವು ನಿರ್ಬಂಧ ವಿಧಿಸಲಾಗಿದೆ. ಹಣಕಾಸಿನ ಇತಿಮಿತಿ ಇದಕ್ಕೆ ಕಾರಣ. ಸರಿಯಾದ ಬೆಲೆ ಸಿಗದ ಹಿನ್ನೆಲೆಯಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುವ ಪರಿಸ್ಥಿತಿ ಎದುರಾಗಿದೆ.

ರೈತರು ಸಾಲದಲ್ಲಿ ಮುಳುಗಬಾರದು ಎಂಬ ಕಾರಣಕ್ಕೆ ಶಾಸನಾತ್ಮಕ ಬೆಲೆ ನಿಗದಿಗೆ ಶಿಫಾರಸು ಮಾಡಿದ್ದೇವೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಆದ್ಯತೆ ನೀಡಿದರಷ್ಟೇ ಉತ್ತಮ ಬೆಲೆ ಸಿಗಲು ಸಾಧ್ಯವಾಗುತ್ತದೆ.

| ಹನುಮನಗೌಡ ಬೆಳಗುರ್ಕಿ
ಅಧ್ಯಕ್ಷ, ಕೃಷಿ ಬೆಲೆ ಆಯೋಗ



ಸಂಗ್ರಹ ಚಿತ್ರ

ರೈತರ ವೆಚ್ಚ ಲೆಕ್ಕ ಹೇಗೆ?

- ■ ಪರಿಕರ- ಶೇ.26
- ■ ಜಾನುವಾರು, ಯಂತ್ರೋಪಕರಣ -ಶೇ.16
- ■ ದಿನಗೂಲಿ- ಶೇ.13
- ■ ಕುಟುಂಬ ಶ್ರಮ- ಶೇ.8
- ■ ನಿರ್ವಹಣಾ ವೆಚ್ಚ- ಶೇ.13
- ■ ಭೂಮಿ ಗೇಣಿ -ಶೇ.20
- ■ ಚರ ವೆಚ್ಚದ ಬಡ್ಡಿ- ಶೇ.3
- ■ ಸ್ಥಿರ ವೆಚ್ಚ -ಶೇ.1

ಆಗಬೇಕಿರುವುದೇನು?

- ■ ಮಾರುಕಟ್ಟೆ ದರ ಆಧರಿಸಿ ಬೆಳೆ ನಿಗದಿ ಆಗಬಾರದು, ಬೆಂಬಲ ಬೆಲೆ ಎಂಬುದು ಕಾನೂನು ಬಲ ಆಗಬೇಕು
- ■ ದರ ಗ್ಯಾರಂಟಿ ಸಿಗುವಂತಾಗಬೇಕು
- ■ ಕೃಷಿಕರಿಗೆ ಭದ್ರತೆ ಸಿಗುವಂತಾಗಲು ಆಡಮಾನ ಸಾಲ ಇರಬೇಕು
- ■ ಮೌಲ್ಯವರ್ಧನೆ ಮಾಡಿ ಮಾರುಕಟ್ಟೆ ಬಿಡುವಂತಹ ವ್ಯವಸ್ಥೆ
- ■ ಇನ್‌ಪುಟ್ ಸಬ್ಸಿಡಿ ಹೆಚ್ಚಿಸಬೇಕು
- ■ ವೈಜ್ಞಾನಿಕವಾಗಿ ಉತ್ಪಾದನಾ ವೆಚ್ಚ ಲೆಕ್ಕ ಹಾಕಬೇಕು
- ■ ಗೋದಾಮಿನಂತಹ ಮಾರುಕಟ್ಟೆ ಮೂಲಸೌಕರ್ಯ ಹೆಚ್ಚಾಗಬೇಕು
- ■ ಎಲ್ಲ ಬೆಳೆಗಳಿಗೂ ಬೆಳೆ ವಿಮೆ ಅಗತ್ಯತೆ

ಬೆಂಬಲ ಬೆಲೆ ಎಷ್ಟಾಗಬೇಕು?

(ಪ್ರತಿ ಕ್ವಿಂಟಾಲ್‌ಗೆ ರೂಪಾಯಿಗಳಲ್ಲಿ)

ಬೆಳೆ	ಎಂಎಸ್‌ಪಿ	ಎಷ್ಟಾಗಬೇಕು
ಭತ್ತ	1868	2706
ಜೋಳ	2620	5039
ಸಜ್ಜೆ	2150	4920
ರಾಗಿ	3295	5272
ತೊಗರಿ	6000	9702
ಹೆಸರು	7196	9037
ಉದ್ದು	6000	12,196
ಕಡಲೆ	4875	7132
ಶೇಂಗಾ	5275	11,028
ಸೂರ್ಯಕಾಂತಿ	5885	12,154
ಸೋಯಾ ಅವರೆ	3880	7177
ಹತ್ತಿ	5550	10,005



ರಾಜ್ಯ ಸರ್ಕಾರ ರೈತರಿಗಾಗಿ ಸಾಕಷ್ಟು ಯೋಜನೆ ಜಾರಿಗೆ ತರುತ್ತಿದೆ. ಪ್ರಕೃತಿ ವಿಕೋಪದಲ್ಲಿ ಅನ್ಯಾಯವಾಗಿದೆ ಎಂಬ ಕಾರಣಕ್ಕೆ ಹಿಂದೆಂದೂ ಸಿಗದಷ್ಟು ಪರಿಹಾರವನ್ನು ಹೆಚ್ಚಿಸಿದ್ದೇವೆ.

| ಬಿ.ಸಿ. ಪಾಟೀಲ್ ಕೃಷಿ ಸಚಿವ

ಸಾಲದ ಅವಲಂಬನೆ
ಶೇ.69.6

ಬ್ಯಾಂಕ್, ಸಹಕಾರ ಸಂಘ
ಶೇ.20.5

ಖಾಸಗಿ ಲೇವಾದೇವಿದಾರರು

ಸರಾಸರಿ ಸಾಲ
2013 47,000 ರೂ.
2018 74,121 ರೂ.

ಬೆಲೆ ಲೆಕ್ಕಕ್ಕೆ ಏನೇನು ಅಂಶ ಬೇಕು?

ಬಿತ್ತನೆ ಬೀಜ, ಗೊಬ್ಬರ, ಕೀಟನಾಶಕ, ಭೂಮಿ ಸಿದ್ಧತೆ, ಬಿತ್ತನೆ, ಮಧ್ಯಂತರ ಬೇಸಾಯ, ನೀರಾವರಿ, ಕೊಯ್ಲು, ವಕ್ಕಣಿ, ವರ್ಗೀಕರಣ, ಮಾರುಕಟ್ಟೆ ಸಾಗಣೆ ವೆಚ್ಚ, ಕೂಲಿ, ಯಂತ್ರಗಳ ಬಾಡಿಗೆ, ಕುಟುಂಬದ ಶ್ರಮ, ಸ್ವಂತ ಭೂಮಿ ಅಥವಾ ಗೇಣಿ ಭೂಮಿಯ ವೆಚ್ಚ, ನಿರ್ವಹಣಾ ವೆಚ್ಚಗಳನ್ನು ಲೆಕ್ಕ ಹಾಕಿ ಬೆಲೆ ನಿಗದಿಯಾಗಬೇಕು. ಇದರ ಜತೆಗೆ ರೈತರಿಗೆ ನೆರೆ, ಬರ, ಕೀಟಬಾಧೆ, ಕಾಡುಪ್ರಾಣಿ ಹಾವಳಿ, ಬೆಂಕಿ ಅವಘಡಗಳಿಂದ ನಷ್ಟ ಆಗುತ್ತದೆ.

ಸಾಲ ಏಕೆ? ಬೆಳೆಗೆ ಸರಿಯಾದ ಬೆಲೆ ಸಿಗದೆ ಕಳೆದ 5 ವರ್ಷಗಳಲ್ಲಿ ರೈತರ ಸಾಲದ ಪ್ರಮಾಣ ಶೇ.57.7 ಹೆಚ್ಚಳವಾಗಿದೆ. ಸಣ್ಣ, ಅತಿಸಣ್ಣ ರೈತರು ಖಾಸಗಿ ಲೇವಾದೇವಿದಾರರ ಮೊರೆ ಹೋಗುವುದು ಹೆಚ್ಚಾಗಿ ವಕ್ಕಲುತನದ ಬಗ್ಗೆ ಭ್ರಮನಿರಸನಗೊಂಡಿದ್ದಾರೆ.



ರೈತರ ಸಾಲದ ಪ್ರಮಾಣ

	(ಕೋಟಿ ರೂಗಳಲ್ಲಿ)
2016-17	79,487
2017-18	89,054
2018-19	69,705
2019-20	91,302
2020-21	1,26,842

ರೈತರ ಸ್ಥಿತಿ ಹೇಗಿದೆ?

ರಾಜ್ಯದಲ್ಲಿ ರೈತರಿಗೆ ಭೂಮಿ ಇರಲಿ, ಸರಿಯಾದ ಮನೆಯೂ ಇಲ್ಲದ ಪರಿಸ್ಥಿತಿ ಇದೆ. ಅಧ್ಯಯನವೊಂದರ ಪ್ರಕಾರ 1 ಎಕರೆ ಒಳಗೆ ಭೂಮಿ ಇರುವ ಶೇ. 40.11 ಜನರಿಗೆ ಮನೆ ಇಲ್ಲ. 2 ಎಕರೆ ಒಳಗಿನ ಶೇ.20.52 , 5 ಎಕರೆ ಒಳಗಿನ ಶೇ.13.42 , 14 ಎಕರೆ ಒಳಗಿನ ಶೇ.12.09 ಹಾಗೂ 15 ಎಕರೆ ಮೇಲ್ಪಟ್ಟ ಶೇ.2.67 ಜನರಿಗೆ ಸ್ವಂತ ಮನೆ ಇಲ್ಲ.

ಕೃಷಿ ಉತ್ಪಾದನಾ ವೆಚ್ಚದ ಮೇಲೆ ಶೇ.50 ಲಾಭ ನಿಗದಿ ಮಾಡಿದ್ದರೆ ರೈತರನ್ನು ಸಾಲದ ಸುಳಿಯಿಂದ ಪಾರು ಮಾಡಲಾಗದು. ಬೆಳೆ ಹಾನಿ ಪರಿಹಾರ ಹೆಚ್ಚಾಗಬೇಕು.

| ಜೆ.ಸಿ. ಬಯ್ಯಾರೆಡ್ಡಿ
ಅಧ್ಯಕ್ಷ, ಪ್ರಾಂತ ರೈತ ಸಂಘ



ಕೃಷಿ ಉತ್ಪನ್ನಗಳ ಬೆಲೆ ನಿಗದಿಗೆ ಕಾರ್ಯಬದ್ಧತೆ ಇರಬೇಕು. ಜತೆಗೆ ಸ್ವಾಮಿನಾಥನ್ ಸಮಿತಿಯ ಶಿಫಾರಸು ಸೇರಿಸಿ ನಿಗದಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ರೈತರಿಗೆ ಅನುಕೂಲವೂ ಆಗುವುದಿಲ್ಲ.

| ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ
ಮಾಜಿ ಅಧ್ಯಕ್ಷ, ಕೃಷಿ ಬೆಲೆ ಆಯೋಗ

24-12-2021 Vv Pg 5D

ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ ಲಾಭ ಗಳಿಸಿ: ಶಿವರಾಮು

ಉತ್ತಿ, ಬಿತ್ತಿ, ಕೊಯ್ಲು ಮಾಡಿದರೆ ಕೆಲಸ ಮುಗಿಯಿತೆನ್ನುವ ಪರಿಕಲ್ಪನೆಯಿಂದ ಹೊರಬನ್ನಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರೈತರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಯಲ್ಲಿ ಇನ್ನೂ ಹೆಚ್ಚು ಸುಧಾರಣೆ ಕಾಣಬೇಕಾಗಿದೆ. ಈ ನಿಟ್ಟಿನಲ್ಲಿ ಕೃಷಿಕರು ಕೇವಲ ಉತ್ತಿ, ಬಿತ್ತಿ, ಕೊಯ್ಲು ಮಾಡಿದರೆ ಕೆಲಸ ಮುಗಿಯಿತು ಎನ್ನುವ ಪರಿಕಲ್ಪನೆಯಿಂದ ಹೊರಬಂದು ಕೊಯ್ಲಿನ ನಂತರ ಸಂಸ್ಕರಣೆ, ಮೌಲ್ಯವರ್ಧನೆ, ಗ್ರೇಡಿಂಗ್, ಬ್ರ್ಯಾಂಡಿಂಗ್ ಮತ್ತಿತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ಹೆಚ್ಚು ಆದಾಯ ಪಡೆಯಬಹುದು ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ತರಬೇತಿ ಸಂಯೋಜಕ ಡಾ। ಕೆ.ಶಿವರಾಮು ಅಭಿಪ್ರಾಯಪಟ್ಟರು.



ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಜಿಕೆವಿಕೆಯಲ್ಲಿ ಏರ್ಪಡಿಸಿದ್ದ ರೈತ ದಿನಾಚರಣೆ ಕಾರ್ಯಕ್ರಮವನ್ನು ತೆಂಗಿನ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಲಾಯಿತು. ಸಹಕಾರ ಸಂಘಗಳ ಜಂಟಿ ನಿಬಂಧಕ ಲಕ್ಷ್ಮೀಪತಯ್ಯ, ತರಬೇತಿ ಸಂಯೋಜಕ ಡಾ। ಕೆ.ಶಿವರಾಮು, ಪ್ರಗತಿಪರ ರೈತ ಎಂ.ಎನ್.ರವಿಶಂಕರ್ ಮತ್ತಿತರರು ಹಾಜರಿದ್ದರು.

ಜಿಕೆವಿಕೆಯಲ್ಲಿ ಏರ್ಪಡಿಸಿದ್ದ ರೈತರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಷ್ಟ್ರದ ಆಹಾರ ಭದ್ರತೆಯಲ್ಲಿ ಕೃಷಿಕರ ಪಾತ್ರ ನಿರ್ಣಾಯಕವಾಗಿದೆ. ಕೃಷಿ ಕೇವಲ ಒಂದು ಕಾಯಕವಾಗದೇ ನಮ್ಮ ರಾಷ್ಟ್ರದ ಸಂಸ್ಕೃತಿಯ ಭಾಗವೂ ಆಗಿದೆ. ಕೊಯ್ಲಿನ ನಂತರದ ಚಟುವಟಿಕೆಯಲ್ಲೂ ಕೃಷಿಕರು ತೊಡಗಿಕೊಂಡು ಆದಾಯ ಹೆಚ್ಚಿಸಿಕೊಳ್ಳಬೇಕು. ನಮ್ಮ ಗ್ರಾಮೀಣ ಬದುಕು, ಕಲೆ, ಉಡುಗೆ-ತೊಡುಗೆ ಮತ್ತು ಊಟ-ಉಪಚಾರ ಎಲ್ಲದರ ಮೂಲ ಕೃಷಿಯೇ ಆಗಿದೆ ಎಂದರು.

ರೈತಸ್ನೇಹಿ ಚರಣ್ ಸಿಂಗ್: ದೇಶದ 5ನೇ ಪ್ರಧಾನಿ ಚೌದರಿ ಚರಣ್‌ಸಿಂಗ್ ಅವರ ಜನ್ಮ ದಿನವಾದ ಡಿ.23ರಂದು ರೈತ ದಿನಾಚರಣೆ ಆಚರಿಸಲಾಗುತ್ತಿದೆ. ಕಿಸಾನ್ ಟ್ರಸ್ಟ್ ಸ್ಥಾಪಿಸಿ ರೈತರ ಶ್ರೇಯೋಭಿವೃದ್ಧಿಗೆ ಕಾರಣರಾದರು. ಆದ್ದರಿಂದ ಕೇಂದ್ರ ಸರ್ಕಾರ 2001ರಿಂದ ಸಿಂಗ್ ಅವರ ಜನುಮ ದಿನವನ್ನು ರೈತರ ದಿನಾಚರಣೆ ಯಾಗಿ ಹಮ್ಮಿಕೊಳ್ಳುತ್ತಿದೆಂದು ಸ್ಮರಿಸಿದರು.

ರಾಜ್ಯ ಮಟ್ಟದ ಕೃಷಿ ಪ್ರಶಸ್ತಿ ವಿಜೇತ ಕೋಲಾರದ ಮದನಹಳ್ಳಿ ರೈತ ಎಂ.ಎನ್. ರವಿಶಂಕರ್, ಕೃಷಿ ಮಾರಾಟ, ಸಹಕಾರ ಮತ್ತು ವ್ಯವಹಾರ ನಿರ್ವಹಣೆ ವಿಭಾಗದ ಮುಖ್ಯಸ್ಥ ಡಾ।ಎಂ.ಎಸ್.ಗಣಪತಿ, ಜಿಕೆವಿಕೆ ಸಿಬ್ಬಂದಿ ತರಬೇತಿ ಘಟಕದ ಡಾ। ಆರ್.ನಾರಾಯಣರೆಡ್ಡಿ, ಪ್ರಗತಿಪರ ರೈತ ಮಂಜುನಾಥ್ ಉಪಸ್ಥಿತರಿದ್ದರು.

24-12-2021 Kp Pg 04

24-12-2021 Vk Pg 01

ಕೊಬ್ಬರಿಗೆ 400 ರೂ. ಬೆಂಬಲ

ಹೊಸದಿಲ್ಲಿ: ಕೇಂದ್ರ ಸರಕಾರ ಕೊಬ್ಬರಿ ಮೇಲಿನ ಕನಿಷ್ಠ ಬೆಂಬಲ ಬೆಲೆಯಲ್ಲಿ (ಎಂಎಸ್‌ಪಿ) ಪ್ರತಿ ಕ್ವಿಂಟಾಲ್‌ಗೆ 400 ರೂ. ತನಕ ಏರಿಸಿದೆ.



ಗಿರಣಿಗೆ ನೀಡುವ ಕೊಬ್ಬರಿಯ ಎಂಎಸ್‌ಪಿಯಲ್ಲಿ ಪ್ರತಿ ಕ್ವಿಂಟಾಲ್‌ಗೆ 255 ರೂ. ಹಾಗೂ ಉಂಡೆ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯಲ್ಲಿ400 ರೂ. ಏರಿಕೆ ಮಾಡಲಾಗಿದೆ. 2022ರ ಹಂಗಾಮಿನಲ್ಲಿ ಗಿರಣಿಗೆ ನೀಡುವ ಕೊಬ್ಬರಿಯ ಎಂಎಸ್‌ಪಿಯನ್ನು ಕ್ವಿಂಟಾಲ್‌ಗೆ 10,590 ರೂ.ಗೆ ವೃದ್ಧಿಸಲಾಗಿದೆ. ಉಂಡೆ ಕೊಬ್ಬರಿಯ ಎಂಎಸ್‌ಪಿಯನ್ನು 11,000 ರೂ.ಗೆ ಹೆಚ್ಚಿಸಲಾಗಿದೆ.

ಗ್ರಾಮೀಣ ಮೂಲಸೌಕರ್ಯಕ್ಕೂ ವಿಸ್ತರಿಸಿದ ಸಹಕಾರಿ ಕ್ಷೇತ್ರ

ಬೆಂಗಳೂರು: ಸಹಕಾರ ಸಂಘಗಳು ಇತ್ತೀಚಿನ ದಿನಗಳಲ್ಲಿ ರೈತರ ಅಭಿವೃದ್ಧಿ ಜತೆಗೆ ರಸ್ತೆ, ಕುಡಿವ ನೀರು ಸೇರಿದಂತೆ ಮತ್ತಿತರ ಮೂಲಸೌಕರ್ಯ ಗಳನ್ನೂ ಒದಗಿಸುತ್ತಿದ್ದು, ಇದು ಭವಿಷ್ಯದ ದೃಷ್ಟಿಯಿಂದ ಉತ್ತಮ ಬೆಳವಣಿಗೆಯಾಗಿದೆ ಎಂದು ಸಹಕಾರ ಸಂಘಗಳ ಜಂಟಿ ನಿಬಂಧಕ ಲಕ್ಷ್ಮೀಪತಯ್ಯ ಅಭಿಪ್ರಾಯಪಟ್ಟರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾ ರಾಷ್ಟ್ರೀಯ ಸಮಾವೇಶ ಭವನದಲ್ಲಿ ಗುರುವಾರ ರೈತ ದಿನಾಚರಣೆ ನಡೆಸಿ ಮಾತನಾಡಿದರು.

ಸಹಕಾರ ಸಂಘಗಳು ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರಬರುತ್ತಿದ್ದು, ರೈತರ ಅಭಿವೃದ್ಧಿ ಜತೆಗೆ ರಸ್ತೆ, ಕುಡಿಯುವ ನೀರು ಮತ್ತಿತರ ಮೂಲಸೌಕರ್ಯ ಗಳನ್ನು ಒಳಗೊಂಡ ಸಮಗ್ರ ಗ್ರಾಮೀಣಾಭಿವೃದ್ಧಿಯಲ್ಲಿ ಸಕ್ರಿಯವಾಗಿವೆ. ರೈತರು ಈ ಅವಕಾಶವನ್ನು ಸದುಪಯೋಗಪಡಿಸಿ



ಕೊಳ್ಳಬೇಕು ಎಂದರು.

ಭಾರತದಲ್ಲಿ ಸಹಕಾರ ಸಂಘಗಳ ಪಿತಾಮಹ ಡಾ. ವರ್ಗೀಸ್ ಕುರಿಯನ್ ರವರನ್ನು ರೈತರ ದಿನಾಚರಣೆಯೆಂದು ನೆನಪಿಸಿ ಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದ ಅವರು, ಗುಜ ರಾತಿನಲ್ಲಿ ರೈತರನ್ನು ಮಧ್ಯವರ್ತಿ ಗಳಿಂದ ಮುಕ್ತಗೊಳಿಸಿ, ಒಗ್ಗೂಡಿಸಿ ಆನಂದ್ ಬ್ರ್ಯಾಂಡ್ ಅನ್ನು ವಿಶ್ವದೆಲ್ಲೆಡೆ ಪರಿಚಯಿಸಿದ ಕೀರ್ತಿ ಡಾ. ವರ್ಗೀಸ್ ಕುರಿಯನ್ ಅವರಿಗೆ ಸಲ್ಲುತ್ತದೆ ಎಂದರು.

ವಿಶ್ವವಿದ್ಯಾನಿಲಯ ಬೆಂಗಳೂರಿನ ರಾಜ್ಯ ಮಟ್ಟದ ಕೃಷಿ ಪ್ರಶಸ್ತಿ ವಿಜೇತ ಮದನಹಳ್ಳಿ ರೈತ ಎಂ.ಎನ್. ರವಿಶಂಕರ್, ರೈತರು ಒಂದೇ ಬೆಳೆಗೆ ಸೀಮಿತವಾಗದೆ, ಬಹು ಬೆಳೆಗಳನ್ನು ಮಾರುಕಟ್ಟೆ ಮಾಹಿತಿ ಮೇರೆಗೆ ಬೆಳೆದು ಲಾಭ ಗಳಿಸಲು ಮುಂದಾಗಬೇಕು. ಈ ನಿಟ್ಟಿನಲ್ಲಿ ಸಮಗ್ರ ಕೃಷಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿ ದರು. –ಜಿಕೆವಿಕೆ ತರಬೇತಿ ಸಂಯೋಜಕ ಡಾ.ಕೆ. ಶಿವರಾಮು ಮಾತನಾಡಿದರು.

24-12-2021 Uv Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in

24-12-2021 Vsv Pg 01

ತುಂಡು ಕೃಷಿ ಭೂಮಿ ಖರೀದಿ ನಿಷೇಧ

ಕಡಿಮೆ ವಿಸ್ತೀರ್ಣ ಭೂಮಿಗೆ ದಾಖಲೆ ಸಿಗೋದಿಲ್ಲ

ಎ **ಶಿವಕುಮಾರ್ ಬೆಳ್ಳಿತಟ್ಟೆ** ಬೆಂಗಳೂರು

ರಾಜ್ಯದಲ್ಲಿ ಇನ್ನುಮುಂದೆ ತುಂಡು ಕೃಷಿ ಭೂಮಿ ಖರೀದಿಸುವುದಾಗಲಿ, ಮಾರುವುದಾಗಲಿ ಸಾಧ್ಯವಿಲ್ಲ!

- ಕೃಷಿ ಭೂಮಿ ಖರೀದಿ ಮಾರಾಟಕ್ಕೆ ಕನಿಷ್ಠ 6 ಗುಂಟೆ ನಿಗದಿ

ಯಾವುದೇ ಕಾರಣಕ್ಕೂ ಇನ್ನು 5 ಗುಂಟೆಗಿಂತ ಕಡಿಮೆ ವಿಸ್ತೀರ್ಣದ ಕೃಷಿ ಭೂಮಿಯ ಮಾರಾಟ, ಖರೀದಿ ಎರಡಕ್ಕೂ ಅವಕಾಶವಿಲ್ಲ. ಏಕೆಂದರೆ ಕಡಿಮೆ ವಿಸ್ತೀರ್ಣದ ಭೂಮಿಯನ್ನು ಇನ್ನು ಸರಕಾರ ಸರ್ವೆಯನ್ನೇ ಮಾಡುವುದಿಲ್ಲ. 11ಇ ಸ್ಕೆಚ್ ಕೂಡ ನೀಡುವುದಿಲ್ಲ. ಈ ದಾಖಲೆಗಳಿಲ್ಲದೆ ಆ ಜಮೀನುಗಳು ನೋಂದಣಿಯೇ ಆಗುವುದಿಲ್ಲ. ಇದು ರಾಜ್ಯದ ಸಣ್ಣ ರೈತರಿಗೆ ಮಾರಕವಾಗಿ ಪರಿಣಮಿಸಲಿದೆ.

ಇದಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆ ಹೊಸ ಆದೇಶ ಹೊರಡಿ ಸಿದ್ದು, ಈ ಮೂಲಕ ಕೃಷಿ ಭೂಮಿಯನ್ನು ತುಂಡು ಮಾಡಿ ನಿವೇಶನ ಉದ್ದೇಶಕ್ಕೆ ಮಾರಾಟ ಮಾಡುವುದನ್ನು ನಿಯಂತ್ರಿಸುವುದಾಗಿ ಪ್ರಕಟಿಸಿದೆ.

ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅತಿ ಹೆಚ್ಚು ಇರುವ 3 ಗುಂಟೆಗಿಂತ ಕಡಿಮೆ ವಿಸ್ತೀರ್ಣದ ಜಮೀನನ್ನೇ ಮಾರುವಂತಿಲ್ಲ, ಖರೀದಿಸುವಂತಿಲ್ಲ. ಉಳಿದಂತೆ ರಾಜ್ಯಾದ್ಯಂತ ಇತರ ಜಿಲ್ಲೆಗಳಲ್ಲೂ 5 ಗುಂಟೆಗಿಂತ ಕಡಿಮೆ ವಿಸ್ತೀರ್ಣದ ಜಮೀನುಗಳ ಮಾರಾಟ, ಖರೀದಿ ನಿಷೇಧಿಸಲಾಗಿದೆ. ಆದರೆ ಈಗಾಗಲೇ ಅಸ್ತಿತ್ವದಲ್ಲಿ ರುವ ತುಂಡು ಕೃಷಿ ಭೂಮಿಗಳಿಗೆ ಇದು ಅನ್ವಯವಾಗುವುದಿಲ್ಲ. →12

ಯಾರು, ಯಾರಿಗೆ ತೊಂದರೆ?

- ಕಡಿಮೆ ಜಾಗ ಬೇಕೆನ್ನುವ ಸಣ್ಣ ರೈತರಿಗೆ
- ಸಣ್ಣ ತರಕಾರಿ ಕೈ ತೋಟ ಮಾಡುವವರಿಗೆ
- ದನದ ಕೊಟ್ಟಿಗೆ ನಿರ್ಮಿಸಿಕೊಳ್ಳುವ ರೈತರಿಗೆ
- ಪಸಲು ಹದಕ್ಕಾಗಿ ಕಣ ನಿರ್ಮಿಸುವವರಿಗೆ



- ಹುಲ್ಲು, ಹಸುವಿನ ಮೇವು ಮೆದೆ ಹಾಕುವವರಿಗೆ
- ಬಡಾವಣೆ ಮಾಡಿ ಉಳಿಕೆ ಜಾಗ ಮಾರುವವರಿಗೆ

ರಾಜ್ಯದಲ್ಲಿ ಕೃಷಿಭೂಮಿಯನ್ನು ನಿವೇಶನ ಉದ್ದೇಶಕ್ಕೆ ತುಂಡು ಮಾಡಿ ಮಾರಾಟ ಮಾಡುವ ಪರಿಪಾಠ ಹೆಚ್ಚಾಗಿತ್ತು. ಇದನ್ನು ತಪ್ಪಿಸಲು ಸರಕಾರ ಈ ಆದೇಶ ಹೊರಡಿಸಿದೆ. ಇದರಿಂದ ಕೃಷಿ ಭೂಮಿ ರಕ್ಷಣೆಯಾಗಲಿದೆ.

–ಮೌನೀಶ್ ಮೌದ್ಗಿಲ್ ಆಯುಕ್ತರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ

2070ರ ಹೊತ್ತಿಗೆ ಶೂನ್ಯ ಎಮಿಷನ್‌ನಲ್ಲಿ ಬಿದಿರು ಪ್ರಮುಖ ಪಾತ್ರ

ಬಿದಿರಿನಿಂದ 1500ಕ್ಕೂ ಹೆಚ್ಚು ಉತ್ಪನ್ನಗಳು | ಬಿದಿರು ತಜ್ಞ ರಂಗನಾಥ್ ಕೃಷ್ಣನ್ ಅಭಿಪ್ರಾಯ

ನ ವಿಶ್ವವಾಣಿ ಸುದ್ದಿಮನೆ ಬೆಂಗಳೂರು

1500ಕ್ಕೂ ಹೆಚ್ಚು ಉತ್ಪನ್ನಗಳನ್ನು ಬಿದಿರಿನಿಂದ ತಯಾರಿಸಲಾಗುತ್ತದೆ. ತೈಲ, ಔಷೋಪಕರಣಗಳು, ಆಹಾರ ಮುಂತಾದವುಗಳನ್ನು ತಯಾರಿಸಬಹುದು. 2070ರ ಹೊತ್ತಿಗೆ ಶೂನ್ಯ ಎಮಿಷನ್ (ನೆಟ್ ಜೀರೋ ಟಾರ್ಗೆಟ್) ಗುರಿಯಲ್ಲಿ ಬಿದಿರು ಒಂದು ಪ್ರಮುಖ ಪಾತ್ರ ವಹಿಸಲಿದೆ ಎಂದು ಬಿದಿರು ತಜ್ಞ ರಂಗನಾಥ್ ಕೃಷ್ಣನ್ ಅಭಿಪ್ರಾಯಪಟ್ಟಿದ್ದಾರೆ.



ವಿಶ್ವವಾಣಿ ಕ್ಲಬ್‌ಹೌಸ್‌ನ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂದು ಮುಗಿದು ಹೋಗುತ್ತಿರುವ ಪೆಟ್ರೋಲಿಯಂ (ಫಾಸಿಲ್ ಇಂಧನ) ಇಂಧನದ ಬದಲಾಗಿ ಪರಿಸರ ಸ್ನೇಹಿ ಹಾಗೂ ಪರ್ಯಾಯ ಇಂಧನ ಮೂಲಗಳಾದ ಸೌರಶಕ್ತಿ, ಜೈವಿಕ ಇಂಧನ ಇನ್ನಿತರ ಮೂಲಗಳನ್ನು ಬಳಕೆ ಮಾಡುವ ಕುರಿತು ಸರಕಾರ ಇದೀಗ ವ್ಯಾಪಕ ಯೋಜನೆಗಳನ್ನು ಜಾರಿಗೊಳಿಸಿದೆ. ಬಿದಿರಿನಿಂದ ಹಲವು ಉತ್ಪನ್ನಗಳನ್ನು ಪಡೆಯಬಹುದಾಗಿದೆ ಎಂದು ಅವರು ಮಾಹಿತಿ ನೀಡಿದರು.

ಬಿದಿರಿನ ಬೀಜವು ಎರಡು ಹಂತದಲ್ಲಿ ಲಭ್ಯವಿದೆ. ಸ್ಪರಾಡಿಕ್ ಮತ್ತು ಗ್ರಿಗೇರಿಯಸ್ ಎಂಬ ಎರಡು ಹಂತದಲ್ಲಿ ಅಕ್ಕಿ ಲಭ್ಯವಾಗಲಿದೆ. ಒಂದು ಎಕರೆಯಲ್ಲಿ 1 ಮೆಟ್ರಿಕ್ ಟನ್ ಬಿದಿರು ಹಣ್ಣು ತೆಗೆಯಬಹುದು. 6.8 ಬಿಲಿಯನ್ ಡಾಲರ್ ಮಾರುಕಟ್ಟೆ ವ್ಯವಹಾರ ನಡೆಯುತ್ತಿದೆ. ಬಿದಿರು ಅತ್ಯುತ್ತಮವಾದುದು. ಬಿದಿರಿನ ಸಂಪನ್ಮೂಲದಲ್ಲಿ ವಿಶ್ವಕ್ಕೆ ಭಾರತ ನಂ.1. ಆಗಿದೆ. 1927ರಲ್ಲಿ ಜಾರಿಗೊಳಿಸಿದ ಭಾರತೀಯ ಅರಣ್ಯ ಕಾಯಿದೆಯಲ್ಲಿ ಬಿದಿರು ರಕ್ಷಣೆ ಆದೇಶವಿದೆ. ಉತ್ತರ ಭಾರತದ ಜನ ಬಿದಿರನ್ನು ದೇವರಾಗಿ ಪೂಜಿಸುತ್ತಾರೆ ಎಂದು ಹೇಳಿದರು.

ಬಿದಿರು ಸುಸ್ಥಿರ ಸಸ್ಯ. ಒಮ್ಮೆ ನಾಟಿ ಮಾಡಿದ ಮೇಲೆ ಬೆಳೆಯಲು 3-5 ವರ್ಷ ಆಗುತ್ತದೆ. ಬಿದಿರು 60-100 ವರ್ಷದವರೆಗೂ ಬೆಳೆ ಕೊಡುತ್ತದೆ. ಒಂದೊಂದು ಬಿದಿರನ್ನು ಇಂಗ್ಲಿಷ್‌ನಲ್ಲಿ ಕ್ಲಂಪ್ಸ್ ಎಂದು ಕರೆಯುತ್ತೇವೆ. ಮತ್ತೊಂದು ಬಿದಿರನ್ನು ಕಲ್ಮಮ್ ಎಂದು ಕರೆಯುತ್ತೇವೆ. ಕಟಾವು ಮಾಡಿದಂತೆ ಹೊಸ ಚಿಗುರು ಬರುತ್ತದೆ. ಒಂದು ಚಿಗುರು ಬೆಳೆಯಲು ಮೂರು ವರ್ಷವಾದರೂ ಬೇಕಾಗುತ್ತದೆ.

ಬಿದಿರು ಉಕ್ಕುಗಿಂತ ಶಕ್ತಿಶಾಲಿ

ಇಂಡೋನೇಷ್ಯಾ ಸೇರಿ ಹಲವು ದೇಶಗಳಲ್ಲಿ ಬಿದಿರಿನ ಮನೆಗಳನ್ನು ಕಾಣಬಹುದು. ಇತ್ತೀಚಿಗೆ ಭಾರತದಲ್ಲಿ ಮನೆಗಳನ್ನು ಉಕ್ಕು ಇಲ್ಲದೆ ಬಿದಿರಿನಲ್ಲಿ ನಿರ್ಮಿಸಲಾಗುತ್ತಿದೆ. ಭೂಕಂಪ ಪ್ರದೇಶಗಳಲ್ಲಿ ಬಿದಿರಿನ ಮನೆಗಳು ಭದ್ರವಾಗಿವೆ. ಸಾಂಪ್ರದಾಯಿಕ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಭಾರತದಲ್ಲಿ ಎಂಜಿನಿಯರ್ ಮೊದಲು ನಮ್ಮನ್ನು ಪರಿಗಣಿಸುತ್ತಿರಲಿಲ್ಲ. ಇತ್ತೀಚಿಗೆ ಮಾಲ್ಡೀವ್ಸ್‌ನಲ್ಲಿರುವ ಟೆರಾ ರೆಸ್ಟೋರೆಂಟ್ ಬಿದಿರಿನಿಂದ ನಿರ್ಮಿಸಲಾಗಿದೆ. ಇದರ ವಿನ್ಯಾಸ ಭಾರತದಲ್ಲಿ ಮಾಡಲಾಯಿತು. ಇದು ದೊಡ್ಡ ಯೋಜನೆಯಾಗಿದೆ. ಬೆಂಗಳೂರಿನಲ್ಲಿ ಬಿದಿರಿನಿಂದ ಕ್ಲಬ್‌ಹೌಸ್ ಮಾಡಿದ್ದಾರೆ. ಬಿದಿರು ಉಕ್ಕಿಗಿಂತ ಶಕ್ತಿಶಾಲಿ ಎಂದು ಹೇಳಿದರು.

ಬಿದಿರಿನಲ್ಲಿವೆ ಔಷಧೀಯ ಗುಣ

3200 ರಿಂದ 3500 ಕೋಟಿ ರು. ಮಾರುಕಟ್ಟೆಯಲ್ಲಿ ಬಿದಿರು ಹಣ್ಣಿನಿಂದ ವ್ಯವಹಾರ ನಡೆಯುತ್ತಿದೆ. ಬಿದಿರು ಬೆಳೆಯುವಾಗ ಮೊಳಕೆ ಹಂತದಲ್ಲಿ ಹಣ್ಣು ತೆಗೆಯಲು ಮುಂದಾಗಬೇಕು. ಬಿತ್ತನೆ ಮಾಡಿದ ಎರಡು ಮೂರು ತಿಂಗಳ ಹಂತದಲ್ಲಿ ಕಟಾವು ಮಾಡಿದರೆ ಲಭ್ಯವಿದೆ. ಒಂದು ಸಲ ಕಟಾವು ಮಾಡಿದ ಬಿದಿರಿನ ಹಣ್ಣು ಸೈನೋಗ್ಲೈಸಿಕ್ ಫ್ಲೈಕೋಟಿಕ್ ವಿಷ ತೆಗೆಯಲು ಎರಡು ದಿನ ನೀರಿನಲ್ಲಿ ಇಡಬೇಕು. ಹಣ್ಣಿನಲ್ಲಿ ಕಾರ್ಬೋಹೈಡ್ರೇಡ್ಸ್ ಇದೆ. ಡಯಾಬಿಟಿಸ್ ರೋಗ ನಿವಾರಣೆಗೆ ಸಹಕಾರ ನೀಡಲಿದೆ. ಕ್ಯಾಲ್ಸಿಯಂ, ಮೆಗ್ನೇಷಿಯಂ ಪೊಟಾಲಿಕ್ ಅಂಶವಿದ್ದು, ರೋಗನಿರೋಧಕ ಶಕ್ತಿ ಹೆಚ್ಚಿಸಲಿದೆ. ಕ್ಯಾನ್ಸರ್ ರೋಗ ಬರದಂತೆ ತಡೆಯಲಿದೆ ಎಂದು ಬಿದಿರು ತಜ್ಞ ರಂಗನಾಥ್ ಕೃಷ್ಣನ್ ಮಾಹಿತಿ ನೀಡಿದ್ದಾರೆ.



- ಬಿದಿರು ಆಕ್ಸಿಜನ್ ಉತ್ಪಾದಿಸುವ ಕಣಜ
- ಹವಾಮಾನದಲ್ಲಿನ ಕಾರ್ಬನ್ ಡೈ ಆಕ್ಸೈಡ್ 3-ರಿಂದ 5 ಪಟ್ಟು ಪಡೆದು ನಮಗೆ ಆಕ್ಸಿಜನ್ ನೀಡುತ್ತದೆ
- ಮಣ್ಣಿನ ಸವಕಳಿ ತಡೆಯಲು ಸಹಕಾರಿ
- ನೀರು ಶೇಖರಣೆ ಮಾಡುವ ಮೂಲಕ ಇತರೆ ಸಸಿಗಳಿಗೆ ಪೂರೈಕೆ
- ಆಹಾರ ಮತ್ತು ಹಣ್ಣುಗಳನ್ನು ಬಿದಿರಿನಿಂದ ಪಡೆಯಬಹುದು
- ಬಿದಿರು ಶ್ರೀಮಂತ ಮರವಾಗಿದೆ
- ಬ್ಯಾಂಬೂ (ಬಿದಿರು) ಚಾರ್ಕೋಲ್ ಎಂಬುದನ್ನು ಪ್ರಿಡ್ಜ್‌ನಲ್ಲಿಟ್ಟರೆ ಉತ್ತಮ
- ಬಿದಿರಿನಲ್ಲಿ ಹಲವು ಔಷಧೀಯ ಗುಣಗಳಿವೆ
- ಸೌಂದರ್ಯವರ್ಧಕಗಳನ್ನು ತಯಾರಿಸಲಾಗುತ್ತದೆ





ಬಿದಿರು ವಾಣಿಜ್ಯ ಬೆಳೆಯಾಗಿದೆ. ಬಿದಿರಿನ ಮಹತ್ವ ಹಾಗೂ ವಾಣಿಜ್ಯ ಬೆಳೆಯಾಗಿ ಲಾಭ ಪಡೆಯಬಹುದು ಕುರಿತು ಬಿದಿರು ತಜ್ಞ ರಂಗನಾಥ್ ಕೃಷ್ಣನ್ ಅವರು ಅಪಾರ ಮಾಹಿತಿ ಹೊಂದಿದ್ದಾರೆ. ಅವರು ತಮ್ಮನ್ನು 'ಕೃಷಿ ಉದ್ಯಮಿ' ಎಂದು ಕರೆಸಿಕೊಂಡಿದ್ದಾರೆ. ಭಾರತೀಯ ಬಿದಿರು ಸೊಸೈಟಿ ನ್ಯಾಷನಲ್ ಗೌರ್ನಿಂಗ್ ಕಾರ್ಯದರ್ಶಿ ಆಗಿದ್ದರು. ಪರಿಸರ ಕ್ಷೇತ್ರಗಳಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಬಿದಿರಿನ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದ್ದಾರೆ.

- ವಿಶ್ವೇಶ್ವರ ಭಟ್ ವಿಶ್ವವಾಣಿ ಪ್ರಧಾನ ಸಂಪಾದಕರು

ಕುರಿಯನ್ ಸ್ಮರಣೆ

ಬೆಂಗಳೂರು: ಭಾರತದಲ್ಲಿ ಸಹಕಾರ ಸಂಘಗಳ ಪಿತಾಮಹ ಡಾ.ವರ್ಗೀಸ್ ಕುರಿಯನ್ ಅವರನ್ನು ರೈತರ ದಿನಾಚರಣೆಯೆಂದು ನೆನಪಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಸಹಕಾರ ಸಂಘಗಳ ಜಂಟಿ ನಿಬಂಧಕ ಲಕ್ಷ್ಮೀಪತಯ್ಯ ನುಡಿದರು. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಸಿಬ್ಬಂದಿ ತರಬೇತಿ ಘಟಕವು ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ರೈತರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಗುಜರಾತ್‌ನಲ್ಲಿ ರೈತರನ್ನು ಮಧ್ಯವರ್ತಿಗಳಿಂದ ವಿಮುಕ್ತ ಗೊಳಿಸಿ, ಒಗ್ಗೂಡಿಸಿ ಆನಂದ್ ಬ್ರಾಂಡ್‌ನ್ನು ವಿಶ್ವದೆಲ್ಲೆಡೆ ಪರಿಚಯಿಸಿದ ಕೀರ್ತಿ ಕುರಿಯನ್ ಅವರಿಗೆ ಸಲ್ಲುತ್ತದೆ ಎಂದರು. ಸಹಕಾರ ಸಂಘಗಳು ಇತ್ತೀಚಿನ ದಿನಗಳಲ್ಲಿರೈತರಅಭಿವೃದ್ಧಿಜೊತೆಗೆಗ್ರಾಮೀಣಾಭಿವೃದ್ಧಿಗೂ ಮುಂದಾಗಿರಸ್ತೆಮತ್ತುಕುಡಿಯುವನೀರಿನಸೌಕರ್ಯವನ್ನು ಸಹ ಒದಗಿಸುತ್ತಿದೆ. ಆದುದರಿಂದ ರೈತ ಬಾಂಧವರು ಈ ಅವಕಾಶದ ಸದುಪಯೋಗ ಪಡೆದುಕೊಳ್ಳಬೇಕೆಂದರು. ಎಂ.ಎನ್. ರವಿಶಂಕರ್, ಜಿಕೆವಿಕೆಯ ತರಬೇತಿ ಸಂಯೋಜಕ ಡಾ.ಕೆ.ಶಿವರಾಮು, ಡಾ.ಎಂ.ಎಸ್.ಗಣಪತಿ, ಡಾ.ಆರ್. ನಾರಾಯಣರೆಡ್ಡಿ, ಮಂಜುನಾಥ್ ಮತ್ತಿತರರಿದ್ದರು.

24-12-2021
Sk Pg 03

ಅಡಕೆಗೆ ಪರ್ಯಾಯ ಬೆಳೆ ಪ್ರೋತ್ಸಾಹಿಸಲು 16 ಕೋಟಿ

■ ವಿಕ ಸುದ್ದಿಲೋಕ ಪುತ್ತೂರು(ದ.ಕ.)

ಅಡಕೆಗೆ ಪರ್ಯಾಯ ಬೆಳೆ ಬೆಳೆಸುವ ನಿಟ್ಟಿನಲ್ಲಿ ಬೆಳೆಗಾರರಿಗೆ ಪ್ರೋತ್ಸಾಹ ನೀಡಲು ರಾಜ್ಯ ಸರಕಾರ 16 ಕೋಟಿ ರೂ. ಯೋಜನೆ ಸಿದ್ಧಪಡಿಸಿದೆ ಎಂದು ತೋಟಗಾರಿಕೆ ಖಾತೆ ಸಚಿವ ಮುನಿರತ್ನ ಹೇಳಿದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನ ಮಂಡಲದ ಅಧಿವೇಶನದಲ್ಲಿ ಪುತ್ತೂರು ಶಾಸಕ ಸಂಜೀವ ಮಠಂದೂರು ಕೇಳಿದ ಪ್ರಶ್ನೆಗೆ ಅವರು ಈ ಉತ್ತರ ನೀಡಿದ್ದಾರೆ.

ಶಾಸಕರು ಪ್ರಸ್ತಾಪಿಸಿದ ಬಳಿಕ ಹಳದಿ ರೋಗದ ಬಗ್ಗೆ ಮಾತನಾಡಿದ ಸಚಿವರು, ''ರೋಗದಿಂದಾಗಿ ಶೇ.60ಕ್ಕಿಂತ ಹೆಚ್ಚಿನ ಬೆಳೆ ಹಾನಿ ಉಂಟಾದ ಪ್ರದೇಶದಲ್ಲಿ ಪರ್ಯಾಯ ಬೆಳೆ ಬೆಳೆಸಲು ಪ್ರೋತ್ಸಾಹ ನೀಡಲಾಗುತ್ತದೆ. ಇದಕ್ಕಾಗಿ 16 ಕೋಟಿ ರೂ. ಯೋಜನೆ ತಯಾರಿಸಿ ಆರ್ಥಿಕ ಇಲಾಖೆಗೆ ಅನುಮೋದನೆಗೆ ಕಳಿಸಿದ್ದೇವೆ,'' ಎಂದರು.

ಅಡಕೆ ಹಳದಿ ರೋಗದ ಸಂಶೋಧನೆ ನಡೆಸುವ ಪ್ರಯೋಗಾಲಯಗಳಿಗೆ 8.17 ಕೋಟಿ ರೂ. ಮೀಸಲಿಟ್ಟಿದ್ದೇವೆ. ಅಡಕೆ ಬೆಳೆಗಾರರಿಗೆ ಪರಿಹಾರ ನೀಡುವ ಸಂಬಂಧ ಹಿಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಿರುವ 25 ಕೋಟಿ ರೂ. ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಪತ್ರ ಬರೆಯಲಾಗಿದೆ. ಆದು ಬಿಡುಗಡೆಯಾದ ತಕ್ಷಣ ಸಂಶೋಧನಾ ಉದ್ದೇಶಕ್ಕೆ ಅದರಿಂದ ಬಳಸಲಾಗುವುದು ಎಂದರು.

3 ಕೋಟಿ ಕೇರಳದ ಪಾಲು

ಅಡಕೆ ಹಳದಿ ರೋಗದ ಬಗ್ಗೆ ಸಂಶೋಧನೆ ಮಾಡಲು 3 ಕೋಟಿ ರೂ. ಮಂಜೂರು ಮಾಡಿದ್ದು ಅದನ್ನು ಕೇರಳದ ಕಾಸರಗೋಡಿನಲ್ಲಿರುವ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರ(ಸಿಪಿಸಿಆರ್‌ಐ)ಕ್ಕೆ ನೀಡಲಾಗಿದೆ. ಇದು ಸರಿಯಲ್ಲ. ಈ ಮೊತ್ತವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸಂಶೋಧನಾ ಸಂಸ್ಥೆಗಳಿಗೆ ನೀಡಬೇಕು. ಟಿಎಸ್‌ಎಸ್, ಮ್ಯಾಮ್ಕೋಸ್, ಕ್ಯಾಂಪ್ಕೋ ಮುಂತಾದ ಸಂಸ್ಥೆಗಳು ಈ ನಿಟ್ಟಿನಲ್ಲಿ ಕೆಲಸ ಮಾಡಲು ಸಿದ್ಧರಿದ್ದಾರೆ ಎಂದು ಶಾಸಕ ಮಠಂದೂರು ಸರಕಾರದ ಗಮನ ಸೆಳೆದರು.

ಸಚಿವರ ಈ ಉತ್ತರಕ್ಕೆ ಪ್ರತಿಕ್ರಿಯಿಸಿದ ಸ್ವೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ''ನಾನು ಕೂಡ ಅಡಕೆ ಬೆಳೆಗಾರನಾದ ಕಾರಣ ಕಾಳಜಿಯಿಂದ ಮಾತನಾಡುತ್ತೇನೆ. ಸಚಿವರೇ ನೀವು 25 ಕೋಟಿ ಆರ್ಥಿಕ ಇಲಾಖೆಯಿಂದ ಬರುತ್ತದೆ ಎಂದು ಕಾದು ಕುಳಿತರೆ ಅದು ಬರುವುದೇ ಇಲ್ಲ. ಆರ್ಥಿಕ ಇಲಾಖೆ ಎಲ್ಲಿದೆ ಎಂದು ನಿಮಗೇ ಗೊತ್ತೇ,'' ಎಂದು ಛೇಡಿಸಿದರು.

24-12-2021
Vsv Pg 03

24-12-2021
Vk Pg 09

ಬ್ಯಾಡಗಿ ಎಪಿಎಂಸಿ ಯಾರ್ಡ್‌ಗೆ 97000 ಮೆಣಸಿನ ಚೀಲ ಆವಕ

ಬ್ಯಾಡಗಿ: ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಗೆ ಗುರುವಾರ 97 ಸಾವಿರಕ್ಕೂ ಅಧಿಕ ಮೆಣಸಿನಕಾಯಿ ಚೀಲಗಳು ಆವಕವಾಗಿದ್ದು, ಆವಕದಲ್ಲಿ ನಿರೀಕ್ಷೆಗೂ ಮೀರಿದ ಏರಿಕೆ ಕಂಡುಬಂದಿದೆ. ಅಕಾಲಿಕ ಮಳೆ, ಹವಾಮಾನ ವೈಪರೀತ್ಯದಿಂದಾಗಿ ಆವಕದಲ್ಲಿ ಭಾರಿ ಇಳಿಕೆ ಕಂಡುಬಂದಿತ್ತು. ಇದರಿಂದ ವ್ಯಾಪಾರಸ್ಥರಲ್ಲಿ ಆತಂಕ ಉಂಟು ಮಾಡಿತ್ತು. ಆದರೆ ಕಳೆದ ಸೋಮವಾರ 72,446 ಮೆಣಸಿನಕಾಯಿ ಚೀಲಗಳು ಆವಕವಾಗಿದ್ದು ಸಮಾಧಾನ ನೀಡಿತ್ತು. ಈದೀಗ ಗುರುವಾರ ಮತ್ತೆ 97,751 ಚೀಲಗಳು ಬಂದಿದ್ದು ವ್ಯಾಪಾರಸ್ಥರಲ್ಲಿ ಹರ್ಷ ತಂದಿದೆ.



ಮಾರುಕಟ್ಟೆ ದರ: ಕಡ್ಡಿ ಮೆಣಸಿಗೆ ಗರಿಷ್ಠ 35,599 ರೂ. (ಸರಾಸರಿ 14,209), ಡಬ್ಬಿ ಮೆಣಸಿಗೆ ಗರಿಷ್ಠ 44,222 ರೂ. (ಸರಾಸರಿ 19,869), ಗುಂಟೂರು ಮೆಣಸಿಗೆ ಗರಿಷ್ಠ 12,869 ರೂ. (ಸರಾಸರಿ 6,099) ರೂ. ಇದೆ.

ದರ ನಿಗದಿ, ರೈತರ ಪ್ರತಿಭಟನೆ: ಮೆಣಸಿನಕಾಯಿಗೆ ಉತ್ತಮ ದರ ನೀಡಿಲ್ಲ ಎಂದು ಗುರುವಾರವು ಸಹ ನೂರಾರು ಜನ ರೈತರು ಎಪಿಎಂಸಿ ಎದುರು ಪ್ರತಿಭಟನೆ ನಡೆಸಿದರು. ಮೆಣಸಿನಕಾಯಿಗೆ ಇಷ್ಟೊಂದು ಕನಿಷ್ಠ ಬೆಲೆ ನಿಗದಿ ಮಾಡುತ್ತಿದ್ದರೂ ಎಪಿಎಂಸಿ ಕಣ್ಣುಮುಚ್ಚಿ ಕುಳಿತಿದೆ. ಗುರುವಾರ ದೊರೆತಿರುವ ಬೆಲೆ, ಹಮಾಲಿ ಹಾಗೂ ಲಾರಿ ಬಾಡಿಗೆಗೆ ಕೂಡ ಸಾಕಾಗುವುದಿಲ್ಲ. ಕೂಡಲೇ ಸಮಸ್ಯೆ ಪರಿಹರಿಸಿ ಮೆಣಸಿನಕಾಯಿಗೆ ಉತ್ತಮ ದರ ದೊರಕಿಸಿಕೊಡುವಂತೆ ಪಟ್ಟುಹಿಡಿದರು.

24-12-2021
Vk Pg 02